KATK010000032021

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.2/2021**

ಪ್ರಾ.ಸಾ. ಃ **2**

ದೋ.ಸಾ. ಃ **2**

ದಿ.**01.07.2025.**

ಹೆಸರು ಃ ಸುನಿಲ್ ಕುಮಾರ್

ತಂದೆಯ ಹೆಸರು ಃ ಗಂಗಾಧರಯ್ಯ

ವಯಸ್ಸು ಃ **46** ವರ್ಷ

ಉದ್ಯೋಗ ಃ ವಿಷಯ ಪರಿವೀಕ್ಷಕರು, ಡಿಡಿಪಿಐ ಕಚೇರಿ, ತುಮಕೂರು

ವಾಸಸ್ಥಳ ಃ ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಕಳೆದ ಐದೂವರೆ ವರ್ಷಗಳಿಂದ ನಾನು ಡಿಡಿಪಿಐ ಕಚೇರಿಯಲ್ಲಿ ವಿಷಯ ಪರಿವೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.19.09.2020 ರಂದು ನಮ್ಮ ಕಚೇರಿಯ ಉಪ ನಿರ್ದೇಶಕರು ನನ್ನನ್ನು ಬೆಳಿಗ್ಗೆ 10.15 ಗಂಟೆಗೆ ಕರೆದು, ಗಾಂಜಾ ಪ್ರಕರಣದಲ್ಲಿ ಗಾಂಜಾ ಅಮಾನತ್ತುಪಡಿಸಿಕೊಳ್ಳುವ ಬಗ್ಗೆ ಪತ್ರಾಂಕಿತ ಅಧಿಕಾರಿಯಾಗಿ ಸಿಇಎನ್ ಪೋಲೀಸ್ ಠಾಣೆಗೆ ಹೋಗಲು ನನಗೆ ತಿಳಿಸಿದರು. ಆ ಬಗ್ಗೆ ನನಗೆ ಜ್ಞಾಪನ ಪತ್ರವನ್ನು ನೀಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ9 ಎಂದು ಗುರುತಿಸಲಾಯಿತು.
3. ನನಗೆ ವಿಷಯ ತಿಳಿದ ತಕ್ಷಣ ನಾನು ಸಿಇಎನ್ ಪೋಲೀಸ್ ಠಾಣೆಗೆ ಹೋಗಿ ವರದಿ ಮಾಡಿಕೊಂಡೆನು. ಆ ಸಮಯದಲ್ಲಿ ಠಾಣೆಯಲ್ಲಿ ಪೋಲೀಸ್ ಉಪ ನಿರೀಕ್ಷಕರಾದ ಶ್ರೀಮತಿ ಶಮೀನ್, ಪೋಲೀಸರು, ಸಾಕ್ಷಿದಾರರಾದ ನಂಜುಂಡಶರ್ಮ, ಹರೀಶ್ ಮತ್ತು ರವೀಶ್ ಚಂದ್ರ ಇದ್ದರು. ರವೀಶ್ ಚಂದ್ರ ರವರು ಕಾನೂನು ಮಾಪನ ಶಾಸ್ತ್ರ

ಇಲಾಖೆಗೆ ಸಂಬಂಧಪಟ್ಟವರಾಗಿದ್ದರು. ಅವರು ಬರುವಾಗ ಡಿಜಿಟಲ್ ಮಾಪನ ಯಂತ್ರವನ್ನು ತಂದಿದ್ದರು. ಗಾಂಜಾ ಪ್ರಕರಣದಲ್ಲಿ ಪಂಚನಾಮೆಗೆ ಸಹಕರಿಸಬೇಕೆಂದು ಶ್ರೀಮತಿ ಶಮೀನ್ ರವರು ನಮಗೆ ತಿಳಿಸಿದರು. ಅದಕ್ಕೆ ನಾವು ಒಪ್ಪಿಕೊಂಡೆವು.

4. ನಂತರ ನಮ್ಮನ್ನು ಪೋಲೀಸ್ ಜೀಪಿನಲ್ಲಿ ಕೊರಟಗೆರೆ-ಬೆಂಗಳೂರು ರಸ್ತೆಯ ಉರ್ಡಿಗೆರೆಯ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನದ ಎದುರಿಗೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ವ್ಯಕ್ತಿಯನ್ನು ಪೋಲೀಸರು ಹಿಡಿದುಕೊಂಡಿದ್ದರು. ಆ ಸ್ಥಳ ಅಮ್ಮದ್ ಖಾನ್ ವಾಸ ಇರುವ ಕಾಂತಣ್ಣನವರಿಗೆ ಸೇರಿದ ಬಾಡಿಗೆ ಮನೆಯ ಮುಂದುಗಡೆ ಆಗಿತ್ತು. ನಾನು ಪತ್ರಾಂಕಿತ ಅಧಿಕಾರಿಯಾಗಿದ್ದು, ಪೋಲೀಸರು ಹಿಡಿದುಕೊಂಡಿದ್ದ ವ್ಯಕ್ತಿಯ ಅಂಗಶೋಧನೆ ಮಾಡಲು ನಾನೇ ಅಂಗಶೋಧನೆ ಮಾಡಬಹುದೇ ಅಥವಾ ಬೇರೆಯವರನ್ನು ಕರೆಸಬೇಕೆ ಎಂದು ಕೇಳಿದಾಗ ನೀವೇ ಅಂಗಶೋಧನೆ ಮಾಡಬಹುದು ಎಂದು ಆ ವ್ಯಕ್ತಿ ಹೇಳಿದನು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮಾನ್ಯ ಸರ್ಕಾರಿ ಅಭಿಯೋಜಕರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು